**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ**
**ತಿಪಟೂರು**

**ಸಿ.ಸಿ ನಂ. 499/2016**

ಪಿ.ಡಬ್ಲ್ಯೂ 1

**ದಿನಾಂಕಃ 22-11-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು | ಃ | ರಾಮಯ್ಯ |
| ತಂದೆಯ/ಗಂಡನ ಹೆಸರು | ಃ | ಚಂದ್ರಯ್ಯ |
| ವಯಸ್ಸು | ಃ | 52 ವರ್ಷ |
| ಉದ್ಯೋಗ | ಃ | ಗಾರೆ ಕೆಲಸ |
| ವಾಸ ಸ್ಥಳ | ಃ | ಈಚನೂರು ಕೋಡಿಹಳ್ಳಿ ಕಾವಲು |

**ಮುಖ್ಯ ವಿಚಾರಣೆ** ಶ್ರೀ ಕೆ ಆರ್ ಡಿ ವಕೀಲರಿಂದಃ

**1** ನೇ ಆರೋಪಿ ಚಂದ್ರಯ್ಯ ನನ್ನ ತಂದೆ . **2** ನೇ ಆರೋಪಿಯಾದ ಕಿರಣ್ ಕುಮಾರ್ ರವರು ಯಾರು ಎಂದು ನನಗೆ ಗೊತ್ತಿರುವುದಿಲ್ಲ ಆದರೆ ಅವರು ನಮ್ಮ ತಂದೆಯ ಕಿರಿಯ ಹೆಂಡತಿ ಮಗ ಎನ್ನುತ್ತಿದ್ದಾರೆ. **3** ನೇ ಆರೋಪಿಯಾದ ಲಕ್ಷ್ಮಮ್ಮ ರವರು ನನ್ನ ತಾಯಿ.**4** ನೇ ಆರೋಪಿಯಾದ ತೀರ್ಥವೇಣಿಯವರು ನನ್ನ ತಂಗಿ. ಸುಮಾರು **14** ವರ್ಷದ ಹಿಂದೆ ನಾನು **4** ಜನ ಆರೋಪಿಗಳ ವಿರುದ್ಧ ದಾವೆಯನ್ನು ನನಗೆ ಜಮೀನನ್ನು ಕೊಡಬೇಕು ಎಂದು ಹೂಡಿರುತ್ತೇನೆ. ಸದರಿ ದಾವೆ ನನ್ನ ಪರವಾಗಿ ತೀರ್ಪು ಆಗಿರುತ್ತದೆ. ಸದರಿ ದಾವೆಯಲ್ಲಿ ನ್ಯಾಯಾಲಯದವರು ನನ್ನ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ . **1** ನೇ ಆರೋಪಿಯಾದ ನನ್ನ ತಂದೆಯದು ಹೇಳಿಕೆ ಆಗಿರುತ್ತದೆ. **1** ನೇ ಆರೋಪಿಯವರು ನಾನು ಹೂಡಿರುವ ದಾವೆಯಲ್ಲಿ ಸಾಕ್ಷಿ ಕೊಡುವ ಸಮಯದಲ್ಲಿ ನನು ಅವರ ಮಗನೇ ಅಲ್ಲ ಎಂದು ಸಾಕ್ಷಿ ಕೊಟ್ಟಿರುತ್ತಾರೆ. ನಾನು **1** ನೇ ಆರೋಪಿಯಾದ ಚಂದ್ರಯ್ಯರವರ ಮಗ. **1** ರಿಂದ **4** ನೇ ಆರೋಪಿಯವರು ನಾನು ಚಂದ್ರಯ್ಯರವರ ಮಗ ಅಲ್ಲ ಎಂದು ಹೇಳಿರುತ್ತಾರೆ. ಅವರು ಕೊಟ್ಟಿರುವ ಹೇಳಿಕೆಯನ್ನು ನೋಡಿ ಸಾಕ್ಷಿ ಗುರುತಿಸಿದಾರೆ ಅದನ್ನು ನಿಪಿ-**1** ಎಂದು ಗುರುತಿಸಲಾಗಿದೆ. ಓ.ಎಸ್ ನಂ. **74/2005** ಕ್ಕೆ ಸಂಬಂಧಪಟ್ಟಿರುವ ತೀರ್ಪು ಮತ್ತು ಡಿಕ್ರಿಯನ್ನು ನಿಪಿ-**2** ಮತ್ತು **3** ಎಂದು ಗುರುತಿಸಲಾಗಿದೆ. ನಿಪಿ-**2** ಮತ್ತು **3** ರ ಮೇರೆಗೆ ಆರೋಪಿಗಳು ಮೇಲ್ಮನವಿಯನ್ನು

ಸಲ್ಲಿಸಿರುತ್ತಾರೆ ಸದರಿ ಮೇಲ್ಮನವಿ ತಿರಸ್ಕರಿಸಿರುತ್ತಾರೆ ಅದಕ್ಕೆ ಸಂಬಂಧಪಟ್ಟಿರುವ ತೀರ್ಪನ್ನು ನಿಪಿ-4 ಎಂದು ಗುರುತಿಸಲಾಗಿದೆ. ಆರೋಪಿಗಳು ನಾನು ಮಗನೇ ಅಲ್ಲ ಎಂದು ಅಸಲು ದಾವೆ ನಂ. 74/2005 ರಲ್ಲಿ ತೀರ್ಮಾನದಲ್ಲಿ ಆರೋಪಿಗಳ ವಿರುದ್ಧ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ನನಗೆ ಸೂಚಿಸಿರುತ್ತಾರೆ. ಆದ್ದರಿಂದ ನಾನು ಈ ಪಿರ್ಯಾದಿಯನ್ನು ಆರೋಪಿಗಳ ವಿರುದ್ಧ ನೀಡಿರುತ್ತೇನೆ. ನನ್ನನ್ನು ಚಂದ್ರಯ್ಯರವರ 1 ನೇ ಅಲ್ಲ ಎಂದು 1 ರಿಂದ 4 ರವರು ಅಸಲು ದಾವೆ ನಂ. 74/2005 ರಲ್ಲಿ ಕೊಟ್ಟಿರುವ ಸಾಕ್ಷಿಯಿಂದ ನನಗೆ ಮಾನಸಿಕ ಒತ್ತಡ ಆಗಿರುತ್ತದೆ ಸದರಿ ಸಾಕ್ಷಿಯನ್ನು 1 ನೇ ಆರೋಪಿಯವರು ಉದ್ದೇಶಪೂರ್ವಕವಾಗಿ ನನ್ನ ವಿಭಾಗದ ಹಕ್ಕನ್ನು ತೆರವುಗೊಳಿಸಲು ಅಸಲು ದಾವೆ ನಂ. 74/2005 ರಲ್ಲಿ ಕೊಟ್ಟಿರುತ್ತಾರೆ.

ಪಾಟೀ ಸವಾಲಿಗೆ ಕಾಲಾವಕಾಶವನ್ನು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಿ ಓದಿ ಹೇಳಿ, ಕೇಳಿದಾಗ ಸರಿ ಇದೆ ಎಂದು ಒಪ್ಪಿರುತ್ತಾರೆ.)

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ
ತಿಪಟೂರು.